3. ಕರ್ನಾಟಕ ರಾಜ್ಯದಲ್ಲಿ ದ್ವಿಚಕ್ರವಾಹನಗಳ ಸವಾರರು ಹೆಲ್ಮೆಟ್ ಧರಿಸುವಂತೆ ಕಡ್ಡಾಯ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ ಕ್ಷೇತ್ರ) : ಕರ್ನಾಟಕ ರಾಜ್ಯದಲ್ಲಿ ದ್ವಿಚಕ್ರ ವಾಹನಗಳ ಸವಾರರು ಹೆಲ್ಮೆಟ್ ಧರಿಸುವುದು ಕಡ್ಡಾಯವಾಗಿರುವ ಬಗ್ಗೆ ರಾಜ್ಯ ಸರ್ಕಾರ ಮರು ಪರಿಶೀಲನೆ ಮಾಡುವುದೇ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) : ಈ ವಿಚಾರವಾಗಿ ಸರ್ಕಾರ ಯಾವುದೇ ನಿರ್ಧಾರಕ್ಕೆ ಬಂದಿಲ್ಲ, ಸರ್ಕಾರ ಈ ವಿಚಾರವನ್ನು ಪೂರ್ಣ ಪರಿಶೀಲನೆ ಮಾಡಬೇಕು. ಅದೂ ಮುಖ್ಯವಾಗಿ ಯುವಕರು ಹೆಲ್ಮೆಟ್ ಹಾಕಿದರೆ ಒಳ್ಳೆಯದು. ನಾವು ನಿಮ್ಹಾನ್ಸ್ ಸಂಸ್ಥೆಯ ಅಭಿಪ್ರಾಯವನನ್ನು ತೆಗೆದುಕೊಂಡು ಈ ಬಗ್ಗೆ ವಿಚಾರ ಮಾಡಿ ಸೂಕ್ತ ನಿರ್ಧಾರಕ್ಕೆ ಬರುತ್ತೇವೆ.

4. ಉಡುಪಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಪಥ್ಯಾಹಾರ ಸರಬರಾಜು

ಶ್ರೀ ಯು.ಆರ್. ಸಭಾಪತಿ (ಉಡುಪಿ ಕ್ಷೇತ್ರ) : ಸನ್ಮಾನ್ಯ ಅಧ್ಯಕ್ಷರೇ, ಉಡುಪಿ ಸರಕಾರಿ ಆಸ್ಪತ್ರೆಗೆ ಸಂಬಂಧಿಸಿದ ಪಥ್ಯಾಹಾರ ಸರಬರಾಜುದಾರರಿಗೆ 30-11-1994ರ ಅಂತ್ಯಕ್ಕೆ ರೂ. 5,35,000-00ಗಳ ಬಿಲ್ಲುಗಳು ಬಾಕಿ ಇವೆ. ಅವುಗಳಲ್ಲಿ 31-3-93ರ ಅಂತ್ಯಕ್ಕೆ ಬಾಕಿ ಉಳಿದ ಬಿಲ್ಲುಗಳು ರೂ. 2,47,000-00 ಹಾಗೂ 31-3-94ಕ್ಕೆ ರೂ. 2,74,000-00 ಆಗಿದ್ದು, ಈ ಪಾವತಿ ಕೂಡಲೇ ಆಗದೇ ಹೋದರೆ, ಮುಂದಿನ ತಿಂಗಳು ಪಥ್ಯಾಹಾರ ಸರಬರಾಜು ನಿಲುಗಡೆ ಆಗುವ ಭೀತಿಯಿದ್ದು ಅದನ್ನು ಕೂಡಲೇ ಪಾವತಿಯಾಗುವಂತೆ ಮಾಡಲು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ, ಉಡುಪಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಸಂಬಂಧಿಸಿದಂತೆ 1992-93ನೇ ಸಾಲಿಗೆ ಆಯವ್ಯಯದಲ್ಲಿ ರೂ. 5,45,000-00 ಗಳಿದ್ದು, ಅದರಲ್ಲಿ ರೂ. 5,53,000-00 ಗಳನ್ನು ಬಿಡುಗಡೆ ಮಾಡಲಾಗಿದೆ. ಬಾಕಿ ರೂ. 2,47,000-00 ಗಳಿರುತ್ತದೆ. 1993-94ನೇ ಸಾಲಿಗೆ ಆಯವ್ಯಯದಲ್ಲಿ 5,74,000-00 ಗಳಿದ್ದು, ಅದರಲ್ಲಿ ರೂ. 9,20,000-00ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. 1-4-94ರವರೆಗೆ ಬಾಕಿ ರೂ. 2,74,000-00 ಗಳಿರುತ್ತದೆ. 1994-95ನೇ ಸಾಲಿಗೆ ಆಯವ್ಯಯದಲ್ಲಿ ರೂ. 5,74,000-00 ಗಳಿದ್ದು, ಅದರಲ್ಲಿ ರೂ. 5,74,000-00ಗಳನ್ನು ಬಿಡುಗಡೆ ಮಾಡಲಾಗಿದೆ. ಪಥ್ಯ ಆಹಾರ ಸರಬರಾಜಿನಲ್ಲಿ ಅಡಚಣೆಯಾಗದಿರಲು ಇನ್ನು ಎರಡು ದಿನಗಳಲ್ಲಿ ರೂ. 2,00,000-00 ಗಳನ್ನು ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

5. ರೆವಿನ್ಯೂ ನಿವೇಶನದ ಸಕ್ರಮ ಮತ್ತು ವಿದ್ಯುತ್ ಸರಬರಾಜು ನಿಲ್ಲಿಸಿರುವುದು

ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಗರ ಪ್ರದೇಶದಲ್ಲಿರುವಂತಹ ಜನರ ಸಮಸ್ಯೆಗಳ ಬಗ್ಗೆ ಒತ್ತು ಕೊಡುತ್ತಾರೆಂದು ನಿರೀಕ್ಷೆ ಮಾಡಿದ್ದವು. ಅದರ ಬಗ್ಗೆ ನಿರಾಶೆಯಾಗಿದೆ. 1980ರಿಂದ ರಾಜ್ಯಾದ್ಯಂತ ಜ್ವಲಂತವಾಗಿ ಉಳಿದಿರುವಂತ ಸಮಸ್ಯೆ ರೆವಿನ್ಯೂ ನಿವೇಶನಗಳ ಸಕ್ರಮದ ಸಮಸ್ಯೆ. ಇದು ಕೇವಲ ಕಾಗದದ ಮೇಲೆ ಉಳಿದಿದ್ದು ಅಕ್ರಮ ಎನ್ನುವಂತ ಹಣೆಪಟ್ಟಿ ರಾಜ್ಯದ ಸುಮಾರು 4 ಲಕ್ಷ ಮನೆಗಳಿಗೆ ಇವೆ. ಯಾವ ರೆವಿನ್ಯೂ ಬಡಾವಣೆಗಳಿಗೆ ರಾಜಕಾರಣಿಗಳ ಆಶೀರ್ವಾದ ಇದೆಯೋ ಅಲ್ಲಿ ಎಲ್ಲಾ ನಾಗರೀಕ ಸೌಲಭ್ಯಗಳು ದೊರೆಕಿವೆ, ವಿದ್ಯುತ್ ಸಂಪರ್ಕ ಇಲ್ಲದೆ ಕತ್ತಲ್ಲಲ್ಲಿ ಬದುಕುವಂಥ ಒಂದು ತಾರತಮ್ಯ ಆಗಿದೆ. ಈ ವಿಚಾರದಲ್ಲಿ ಸರ್ಕಾರ ಆದೇಶಗಳಿಗೆ ಬೆಲೆಯೇ ಇಲ್ಲದ ರೀತಿಯಲ್ಲಿ ಆಗಿದೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದಾಗ

1985ರ ಡಿಸೆಂಬರ್‌ನಲ್ಲಿ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದರು. ಈ ಸಮಸ್ಯೆ ಬಗ್ಗೆ ಒಂದು ಪರಿಹಾರವನ್ನು ಹುಡುಕುವುದಕ್ಕೆ ಹೊರಟಂಥ ಮೊದಲನೆಯ ಮುಖ್ಯಮಂತ್ರಿಯಾಗಿದ್ದರು. ಆದರೆ 1987ರ ನಂತರದಲ್ಲಿ ಬಂದ ಸರ್ಕಾರಿ ಆಜ್ಞೆಗಳು ಯಾವುದೂ ಪಾಲನೆಗೆ ಬರಲಿಲ್ಲ. 1990ರಲ್ಲಿ ಕಾಂಗ್ರೆಸ್ ಸರ್ಕಾರ ಬಂದತಕ್ಷಣ ರೆವಿನ್ಯೂ ನಿವೇಶನಗಳಿಗೆ ವಿದ್ಯುತ್ ಸಂಪರ್ಕ ನಿಲ್ಲಿಸುವ ಒಂದು ಆದೇಶವನ್ನು ಹೊರಡಿಸಿದರು. ಆದರೆ ಆ ಆದೇಶ ಪಾಲನೆ ಕೇವಲ ಬಡವರ ಪಾಲಿಗೆ ಮಾತ್ರ ಮಾರಕವಾಯಿತು. ಆಜ್ಞೆ ಇದ್ದರೂ ಸುಮಾರು 42 ಸಾವಿರಕ್ಕಿಂತ ಹೆಚ್ಚು ರೆವಿನ್ಯೂ ಮನೆಗಳವರು ಕೆಇಬಿ ಸಂಪರ್ಕ ತೆಗೆದುಕೊಂಡಿದ್ದಾರೆ. 1992ರ ಫೆಬ್ರವರಿ 5ರಂದು ರಾಜ್ಯಪತ್ರವನ್ನು ಮತ್ತೊಂದು ಬಾರಿ ಹೊರಡಿಸಿ ಸರ್ಕಾರಿ ಆಜ್ಞೆಯಾಗಿ ಸಕ್ರಮ ಸಮಿತಿ ರಚನೆ ಮಾಡಿ ಅದಕ್ಕೆ ರೂಪುರೇಷೆ ಕೊಟ್ಟಿತ್ತು. ಮತ್ತೆ 1994ರ ಮಾರ್ಚ್ 8 ರಂದು ಮತ್ತೊಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಮಾನ್ಯ ರಾಜ್ಯಪಾಲರು 1994ರ ಅಕ್ಟೋಬರ್ 3 ರಂದು ಒಂದು ಅಧಿಸೂಚನೆಯನ್ನು ಹೊರಡಿಸಿದ್ದಾರೆ. ಆದರೆ ಅದರಲ್ಲಿ ಇರುವಂತ ಸಕ್ರಮ ಸಮಿತಿಯನ್ನು ಚಾಲನೆಗೆ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಕಾರಣ ಅದರಲ್ಲಿರುವಂತಹ ಸಮಿತಿಯ ಸದಸ್ಯರು ಇಂದು ಯಾರೂ ಇಲ್ಲ. ಆ ದೃಷ್ಟಿಯಲ್ಲಿ ಸರ್ಕಾರಿ ಆಜ್ಞೆಗೆ ಬೆಲೆ ಇಲ್ಲದ ರೀತಿಯಲ್ಲಿ ಆಗಿದೆ.

(ಉಪಾಧ್ಯಕ್ಷರು (ಶ್ರೀ ಎಂ.ಎಸ್. ಪಾಟೀಲ್) ರವರು ಪೀಠವನ್ನಲಂಕರಿಸಿದರು)

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ಈ ಒಂದು ಪ್ರಶ್ನೆಯನ್ನು ನಮ್ಮ ರೆವಿನ್ಯೂ ಇಲಾಖೆಗೆ ಕಳುಹಿಸಿದ್ದಾರೆ. ಆದರೆ ಇದು ನಮಗೆ ಬರುವುದಿಲ್ಲ. ಹೆಚ್.ಯು.ಡಿ.ಗೆ ಬರುತ್ತದೆ. ನಾವು ಅವರಿಗೆ ಕಳುಹಿಸಿದ್ದೇವೆ. ಬಹುಶಃ ನಾಳೆ ಸಂಬಂಧಿಸಿದವರು ಉತ್ತರ ಕೊಡಬಹುದೆಂದು ಕಾಣುತ್ತದೆ. ಇದು ರೆವಿನ್ಯೂ ಇಲಾಖೆಗೆ ಬರುವುದಿಲ್ಲ.

(ಗೊಂದಲ)

ಶ್ರೀ ಎ. ರಾಮದಾಸ್ : ಇದು ಕೇವಲ ಹೆಚ್‌ಯುಡಿ.ಗೆ ಸಂಬಂಧಪಟ್ಟದ್ದುದು ಮಾತ್ರ ಅಲ್ಲ. ಇದು ರೆವಿನ್ಯೂ ಇಲಾಖೆಗೆ ಕೂಡ ಸೇರಿದೆ. ಆದುದರಿಂದ ಎರಡೂ ಇಲಾಖೆಗಳಿಗೆ ಸೇರಿದ ವಿಚಾರವಾಗಿರುವುದರಿಂದ ಇದನ್ನು ಸಭೆಯ ಮುಂದೆ ಯಾವಾಗ ತರುವುದಕ್ಕೆ ಅಪ್ಪಣೆ ಕೊಡುತ್ತೀರೋ ಆಗ ಪ್ರಸ್ತಾಪ ಮಾಡುತ್ತೇನೆ.

ಉಪಾಧ್ಯಕ್ಷರು : ನಾಳೆ ತೆಗೆದುಕೊಳ್ಳೋಣ.

ಶ್ರೀ ವೈಜನಾಥ ಪಾಟೀಲ್ : ನಾನು ಈಗಲೇ ಉತ್ತರ ಕೊಡುವುದಕ್ಕೆ ತಯಾರಿದ್ದೇನೆ.

ಉಪಾಧ್ಯಕ್ಷರು : ಉತ್ತರ ಕೊಡುತ್ತಾರಂತೆ....

ಶ್ರೀ ಎ. ರಾಮದಾಸ್ : ಈ ವಿಚಾರದಲ್ಲಿ 1992ರ ಫೆಬ್ರವರಿ 5ನೇ ತಾರೀಖು ರಾಜ್ಯಪತ್ರದಲ್ಲಿ ಒಂದು ಸಕ್ರಮ ಸಮಿತಿ ಮಾಡಿ ಕೆಲವು ರೂಪುರೇಷೆಗಳನ್ನು ಕೊಟ್ಟಿತ್ತು. ಈ ದಿಸೆಯಲ್ಲಿ 1994ರ ಮಾರ್ಚ್ 8ರಂದು ಇನ್ನೊಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಮಾನ್ಯ ರಾಜ್ಯಪಾಲರು 1994ರ ಅಕ್ಟೋಬರ್ 3 ರಂದು ಇನ್ನೊಂದು ಅಧಿಸೂಚನೆಯನ್ನು ಹೊರಡಿಸಿದ್ದಾರೆ. ಅದರಲ್ಲಿರುವಂತೆ ಸಕ್ರಮ ಸಮಿತಿ ಚಾಲನೆಗೆ ಬರುವುದು ಸಾಧ್ಯವಾಗುತ್ತಿಲ್ಲ. ಹೀಗೆ 5 ಆಜ್ಞೆಗಳು ಒಂದು ದಶಕದಲ್ಲಿ ಬಂದಿದ್ದರೂ ಕೂಡ, ಒಂದೂ ಕೂಡ ಕಿಮ್ಮತ್ತು ಇಲ್ಲದ ರೀತಿಯಲ್ಲಿ, ಸರ್ಕಾರಿ ಆಜ್ಞೆಗೆ ಬೇ ಇಲ್ಲದ ರೀತಿಯಲ್ಲಿ ಆಗಿದೆ. ಈ ಸಮಸ್ಯೆ ಪರಿಹಾರಕ್ಕೆ ಕೇವಲ ನಗರಾಭಿವೃದ್

ಇಲಾಕೆ ಮಾತ್ರ ವ್ಯವಹರಿಸಿದೆ. ಆದರೆ ಕಂದಾಯ ಇಲಾಖೆ ತನ್ನ ಕರ್ತವ್ಯವನ್ನು ಮರೆತಿದೆ. ಯಾವ ರೆವಿನ್ಯೂ ಜಮೀನಿನಲ್ಲಿ ಮನೆಗಳು ನಿರ್ಮಾಣವಾಗಿದೆ. ಆ ಜಮೀನುಗಳು ರೆವಿನ್ಯೂ ದಾಖಲಾತಿಗಳ ಪ್ರಕಾರ ಇನ್ನೂ ವ್ಯವಸಾಯ ಭೂಮಿಯಾಗಿ ಉಳಿದಿವೆ; ಮತ್ತು ಅಲ್ಲಿ ಫಸಲು ಬೆಳೆಯುತ್ತಿದೆ. ಕಂದಾಯವನ್ನು ಕೂಡ ಸರ್ಕಾರ ತೆಗೆದುಕೊಳ್ಳುತ್ತಿದೆ. ವ್ಯವಸಾಯೇತರ ಕಾರ್ಯಕ್ಕೆ ಉಪಯೋಗವಾಗುತ್ತಿರುವ ವಿಚಾರ ದಾಖಲೆಯಲ್ಲಿ ಇಲ್ಲ, ವ್ಯವಸಾಯಕ್ಕೆ ಎಂದು ದಾಖಲಾತಿಯಾಗಿದೆ. ಈ ರೀತಿ ಕಣ್ಣು ಮುಚ್ಚಿಕೊಂಡು ದಾಖಲೆಯನ್ನು ಬರೆಯುವಂತದ್ದು ರೆವಿನ್ಯೂ ಇಲಾಖೆಯಲ್ಲಿ ಆಗುತ್ತಿದೆ. ಇದು ಅರ್ಥಹೀನವಾದ ವಿಚಾರ. ಇದೇ ಪ್ರದೇಶದಲ್ಲಿರುವಂಥ ಒಂದು ಪ್ರದೇಶಕ್ಕೆ ನಗರ ಪಾಲಿಕೆಯವರು ಈ ಪ್ರದೇಶ ವಸತಿ ಉಪಯೋಗಕ್ಕೆ ಆಗಿದೆ ಎಂದು ಎಂದು ದಾಖಲಾತಿ ಮಾಡಿ ಮನೆಗಳ ಕಂದಾಯವನ್ನು ಕೂಡ ಅದೇ ಪ್ರದೇಶಕ್ಕೆ ತೆಗೆದುಕೊಂಡಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಇದು ನಮಗೂ ಕನ್‌ಫ್ಯೂಷನ್, ನಿಮಗೂ ಕನ್‌ಫ್ಯೂಷನ್.

ಉಪಾಧ್ಯಕ್ಷರು : ನೀವು ವಿಚಾರಗಳನ್ನು ಪ್ರಸ್ತಾಪ ಮಾಡಿ. ಆದರೆ ಓದತಕ್ಕದ್ದು ಬೇಡ. ತಾವು ಏನು ಹೇಳಬೇಕಾಗಿದೆ ಅದೆಲ್ಲವನ್ನು ಹೇಳಿ.

ಶ್ರೀ ಎ. ರಾಮದಾಸ್ : ಹೇಳುವಂತ ವಿಚಾರ ಇಷ್ಟೆ. ಸುಮಾರು ಎರಡು ದಶಕಗಳಿಂದ ಸಮಸ್ಯೆ ಹಾಗೆಯೇ ಉಳಿದುಕೊಂಡು ಬಂದಿದೆ. ಸರ್ಕಾರಿ ಆಜ್ಞೆಗಳು ಯಾವ ರೀತಿ ಆಗಿದ್ದವು ಎಂಬ ವಿಚಾರವನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಮುಖ್ಯವಾದ ವಿಚಾರ ಇಷ್ಟೆ. ಸಕ್ರಮ ಸಮಿತಿಗಳು ಏನಾಗಿವೆ ಆ ಆಜ್ಞೆಗಳು ಇಮತ್ತಿನವರೆಗೆ ಪಾಲನೆಗೆ ಬಂದಿಲ್ಲ, ಈ ಸಮಸ್ಯೆಯನ್ನು ಕೇವಲ ಚುನಾವಣೆ ಸಮಯಕ್ಕೆ ಮಾತ್ರ ಉಪಯೋಗಿಸಿಕೊಳ್ಳದೆ ಸಮಸ್ಯೆಯನ್ನು ಪರಿಹಾರ ಮಾಡುವಂಥ ದಿಸೆಯಲ್ಲಿ ಆಗಬೇಕಾದ ಕೆಲಸ ಇದೆ. ಆ ಕೆಲಸ ಆಗಬೇಕಾಗಿದೆ. ಎರಡನೆಯದಾಗಿ, ವಿದ್ಯುತ್ ಸಂಪರ್ಕದ ಬಗ್ಗೆ ಹೇಳುವುದಾದರೆ, ವಿದ್ಯುತ್ ಅವಶ್ಯಕ ವಸ್ತು ಎಂದು ನ್ಯಾಯಾಲಯದಿಂದ ಆಜ್ಞೆ ತೆಗೆದುಕೊಂಡು ರೆವಿನ್ಯೂ ಮನೆಗಳವರು ವಿದ್ಯುತ್ ಸಂಪರ್ಕ ತೆಗೆದುಕೊಂಡಿದ್ದಾರೆ. ಈ ವಿಚಾರದಲ್ಲಿ ಸರ್ಕಾರದ ವತಿಯಿಂದ ಮೊದಲು ಇದಕ್ಕೆ ಉತ್ತರ ಬರಬೇಕು.

ಶ್ರೀ ಸಿದ್ಧರಾಮಯ್ಯ : ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ನಿಯಮ 351ರಲ್ಲಿ ಮಾನ್ಯ ಸದಸ್ಯರು ಸರ್ಕಾರದ ಗಮನವನ್ನು ಗಮನವನ್ನು ಸೆಳೆಯುತ್ತಿದ್ದಾರೆ. ಮಾನ್ಯ ಸದಸ್ಯರು ಹೊಸದಾಗಿ ಬಂದಿದ್ದಾರೆ. ಏನು ಗಮನ ಸೆಳೆಯಬೇಕೆಂದಿದ್ದಾರೆ. ಅದನ್ನು ಓದಬೇಕು, ಅದಕ್ಕೆ ಸರ್ಕಾರದವರು ಉತ್ತರ ಹೇಳುತ್ತಾರೆ. ಅಷ್ಟು ಬಿಟ್ಟು ಭಾಷಣ ಮಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಬೇಡಿ. ಅದು ಹೊಸ ಸಂಪ್ರದಾಯ ಆಗುತ್ತದೆ.

ಉಪಾಧ್ಯಕ್ಷರು : ಮಾನ್ಯ ಸದಸ್ಯರು ಹೊಸದಾಗಿ ಬಂದಿದ್ದಾರೆ. ತಾವು ಸೂಚನೆ ಕೊಟ್ಟಿರತಕ್ಕದ್ದು. ರೆವಿನ್ಯೂ ನಿವೇಶನದ ಸಕ್ರದ ಮತ್ತು ವಿದ್ಯುತ್ ಸರಬರಾಜು ನಿಲ್ಲಿಸಿರುವ ಬಗ್ಗೆ ಅಷ್ಟೇ ಕೊಟ್ಟಿದ್ದೀರಿ. ಅಷ್ಟರಮಟ್ಟಿಗೆ ಸರ್ಕಾರದ ಗಮನ ಸೆಳೆಯಿರಿ. ಅವರು ಅದಕ್ಕೆ ಉತ್ತರ ಹೇಳುತ್ತಾರೆ.

ಶ್ರೀ ಬಿ.ಬಿ. ಶಿವಪ್ಪ : ಮಂತ್ರಿಗಳು ಹೇಳಿದ ರೀತಿಯಲ್ಲಿ ಅನೇಕ ಸದಸ್ಯರು ಹೊಸಬರು ಬಂದಿದ್ದಾರೆ. ಅವರು ಯಾವುದೋ ಸಂದರ್ಭದಲ್ಲಿ ಯಾವುದೋ ರೀತಿಯಲ್ಲಿ ಮಾತನಾಡುವಾಗ ನಾವೆಲ್ಲರೂ ಅನುಭವಿಗಳು ಸಹಕರಿಸಬೇಕು. ಅವರು ಮಾತನಾಡಿದ್ದನ್ನು ಯಾವ ರೀತಿ ಮಾತನಾಡುತ್ತಾರೆಂದು....

ಉಪಾಧ್ಯಕ್ಷರು : ತಮ್ಮ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಮಾನ್ಯ ಸದಸ್ಯರು ಹೊಸದಾಗಿ ಬಂದಿದ್ದಾರೆ.

ಶ್ರೀ ಬಿ.ಬಿ. ಶಿವಪ್ಪ : ರೆವಿನ್ಯೂ ಮತ್ತು ಹೆಚ್‌ಯುಡಿ ಎರಡೂ ಸೇರಿ ರೆವಿನ್ಯೂ ದಾಖೆಯಲ್ಲಿರತಕ್ಕ ಜಾಗದಲ್ಲಿ ಮನೆಗಳನ್ನು ಕಟ್ಟಿ ಆಗಿದೆ. ಅದಕ್ಕೆ ನೀರು ಮತ್ತು ಕರೆಂಟ್ ಕೊಟ್ಟಿದ್ದೀರಿ. ಕೆಲವರಿಗೆ ಕೊಟ್ಟಿಲ್ಲ. ಇವತ್ತು ಅಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಬೆಳೆ ಬೆಳೆಯುತ್ತಿದ್ದಾರೆಂದು ರೆವಿನ್ಯೂ ದಾಖಲಾತಿಯಲ್ಲಿ ರಿಜಿಸ್ಟರ್ ಆಗುತ್ತಿದೆ. ಇದು ಏನು ಅವ್ಯವಹಾರ ಎಂದು ಕೇಳುತ್ತಿದ್ದಾರೆ. ಮಾನ್ಯ ಸದಸ್ಯರು ಹೊಸದಾಗಿ ಬಂದಿರುವುದರಿಂದ ಏನೋ ಒಂದು ರೀತಿಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಮಾರ್ಗದರ್ಶನ ಮಾಡಬೇಕು. ಹೊಸದಾಗಿ ಬಂದಿದ್ದೀರಿ, ಕುಳಿತುಕೊಳ್ಳಿ ಎಂದರೆ ಆಗುವುದಿಲ್ಲ.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿ ಕೋರಿ ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ. ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಅಧಿನಿಯಮ 1991 ದಿನಾಂಕ 1.8.92 ರಿಂದ ಜಾರಿಗೆ ಬಂದಿರುತ್ತದೆ. ಸದರಿ ಅಧಿನಿಯಮದ ಅನ್ವಯ ದಿನಾಂಕ 31.3.90ಕ್ಕೆ ಮೊದಲು ನಿರ್ಮಿಸಲಾದ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸಲು ಪರಿಗಣಿಸಬಹುದಾಗಿದ್ದು, ಅದರಂತೆ ರಾಜ್ಯ ಸರ್ಕಾರಕ್ಕೆ ಸೇರಿದ ಮತ್ತು ವ್ಯಕ್ತಿಯ ಒಡೆತನದಲ್ಲಿರುವ ರೆವಿನ್ಯೂ ನಿವೇಶನ ಅಥವಾ ಯಾವುದೇ ಪ್ರಾಧಿಕಾರವು ತನ್ನ ಯೋಜನೆಗೆ ಭೂ ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿದ್ದು ಅಂತಹ ಭೂಮಿಯ ಕಬ್ಜೆಯನ್ನು ಪಡೆಯದಿದ್ದ ಭೂಮಿಯ ಮೇಲೆ ನಿರ್ಮಿಸಿದ್ದ ಅನಧಿಕೃತ ನಿರ್ಮಾಣಗಳನ್ನು ನಿವೇಶನದೊಡನೆ ಸಕ್ರಮಗೊಳಿಸಲು ಅವಕಾಶವಿದೆ. ಆದರೆ ಯಾವುದೇ ರೆವಿನ್ಯೂ ನಿವೇಶನಗಳನ್ನು ಸಕ್ರಮಗೊಳಿಸುವ ಪ್ರಸ್ತಾವನೆ ಈ ಇಲಾಖೆಯ ವ್ಯಾಪ್ತಿಗೆ ಸೇರಿದ್ದಲ್ಲ.

ಸರ್ಕಾರದ ಸುತ್ತೋಲೆ ಸಂಖ್ಯೆ 11 ಎಂಐಬಿ 94 ದಿನಾಂಕ 22.10.94ರ ಪ್ರಕಾರ ಈ ಹಿಂದೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ವಿದ್ಯುಚ್ಛಕ್ತಿ ಸರಬರಾಜು ಮಾಡಿರುವ ಕಟ್ಟಡಗಳಿಂದ ವಿದ್ಯುತ್‌ಚ್ಛಕ್ತಿ ಸರಬರಾಜನ್ನು ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸಲು ಬಂದಿರುವ ಅರ್ಜಿಗಳು ವಿಲೇವಾರಿ ಆಗುವವರೆಗೆ ರದ್ದುಪಡಿಸಬಾರದೆಂದೂ ಮತ್ತು ಹೊಸದಾಗಿ ವಿದ್ಯುತ್‌ಚ್ಛಕ್ತಿ ಸರಬರಾಜಿಗಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಿ ಅನಧಿಕೃತ ಕಟ್ಟಡಗಳ ಸಕ್ರಮಗೊಳಿಸುವ ನಿಯಮಗಳಿಗೆ ಒಳಪಡಿಸಿ ವಿದ್ಯುತ್‌ಚ್ಛಕ್ತಿ ಸರಬರಾಜು ನೀಡಬಹುದೆಂತಲೂ ಸೂಚನೆ ನೀಡಲಾಗಿದೆ.

ಇದಾದ ನಂತರ ಯಾವುದೇ ರೀತಿಯ ದೂರು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

12.45 ಪಿ.ಎಂ.

6. ಕೆ.ಆರ್. ನಗರ ತಾಲ್ಲೂಕಿನಲ್ಲಿರುವ ಶ್ರೀರಾಮ ಸಕ್ಕರೆ ಕಾರ್ಖಾನೆ

ಶ್ರೀ ಸಿ.ಎಚ್. ವಿಜಯಶಂಕರ್ (ಹುಣಸೂರು) : ಮಾನ್ಯ ಅಧ್ಯಕ್ಷರೆ, ನನ್ನ ಭಾಗದ ಕೆ.ಆರ್. ನಗರ ತಾಲ್ಲೂಕಿನಲ್ಲಿ ಶ್ರೀರಾಮ ಸಕ್ಕರೆ ಫ್ಯಾಕ್ಟರಿ ಏನಿದೆ ಅದರಲ್ಲಿ ಅರೆಯಬೇಕಾದ ಕಬ್ಬು ಏನಿದೆ ಅದರಲ್ಲಿ ತಾಂತ್ರಿಕ ದೋಷದಿಂದ ಅರ್ಧ ಭಾಗ ಮಾತ್ರ ಅರೆಯುವುದಕ್ಕೆ ಸಾಧ್ಯವಾಗುತ್ತಿದೆ. 1400-1500 ಟನ್ ದಿನನಿತ್ಯ ಅರೆಯಬೇಕಾದ ಕಂಪೆನಿ ಕೇವಲ 750-800 ಟನ್ ಮಾತ್ರ ಕಬ್ಬನ್ನು ಅರೆಯುವಂಥ ವ್ಯವಸ್ಥೆ ಇರುವುದರಿಂದ ಉಳಿದಂಥ ಕಬ್ಬನ್ನು ಕಟಾವು ಮಾಡಲಿಕ್ಕೆ ಪರ್ಮಿಟ್ ಸಿಗದೆ